## ಪ್ರಾರ್ಥನೆ

# ಜಗದ್ಗುರು ಶ್ರೀರಾಮಕೃಷ್ಣಸ್ತೋತ್ರ – 4

**ತ್ವಂ ಹಿ ವಿಷ್ಣುರ್ವಿರಿಂಚಿಸ್ತ್ವಂ ತ್ವಂ ಚ ದೇವೋ ಮಹೇಶ್ವರಃ।**
**ತ್ವಂ ಚೈವ ಶಕ್ತಿರೂಪೋಽಸಿ ನಿರ್ಗುಣಸ್ತ್ವಂ ಸನಾತನಃ।**
**ತ್ವಾಂ ಸ್ತೋತುಂ ಕೋಽತ್ರ ಶಕ್ತಃ ಸ್ಯಾದ್ ಭಾವಾತೀತಮನಾಮಯಮ್**
**ಭಗವನ್ ಸರ್ವಭೂತಾತ್ಮನ್ ರಾಮಕೃಷ್ಣ ನಮೋಽಸ್ತುತೇ॥೧೩॥**

ನೀನೇ ವಿಷ್ಣು , ನೀನೇ ಬ್ರಹ್ಮನು, ನೀನೇ ಮಹೇಶ್ವರನು, ನೀನೇ ಶಕ್ತಿರೂಪನೂ ಆಗಿರುವೆ. (ನಾಮರೂಪಗಳುಳ್ಳ ಈ ಎಲ್ಲ ದೇವತಾಸ್ವರೂಪಗಳನ್ನು ಮೀರಿದ) ನಿರಾಕಾರ ಸ್ವರೂಪನೂ ಶಾಶ್ವತನೂ ನೀನೇ ಆಗಿರುವೆ. ಭಾವಗಳನ್ನು ಮೀರಿದ ತ್ರಿಗುಣಾತೀತನಾದ ನಿನ್ನನ್ನು ಸ್ತೋತ್ರಮಾಡಲು ಯಾರಿಗೆ ಸಾಧ್ಯವಿದೆ! ಸಕಲ ಜೀವಿಗಳ ಸ್ವರೂಪಿಯೆ, ಪರಮಾತ್ಮನೆ, ಶ್ರೀರಾಮಕೃಷ್ಣ— ನಿಮಗೆ ನಮಸ್ಕಾರ.

**ಸರ್ವಾಯ ಸರ್ವಪಾರಾಯ ಸರ್ವಭಾವಸ್ವರೂಪಿಣೇ**
**ಸರ್ವಭಾವವಿಹೀನಾಯ ರಾಮಕೃಷ್ಣಾಯ ತೇ ನಮಃ ॥ ೧೪ ॥**

ಎಲ್ಲವೂ ಆಗಿರುವ, ಎಲ್ಲರ ನೆಲೆಯಾಗಿರುವ, ಎಲ್ಲ ಭಾವಗಳ ಸ್ವರೂಪದಲ್ಲಿದ್ದೂ ಎಲ್ಲ ಭಾವರಹಿತರೂ ಆಗಿರುವ ಶ್ರೀರಾಮಕೃಷ್ಣ, ನಿಮಗೆ ನಮಸ್ಕಾರ.

**ಮಹಾಮಾಯಾಸ್ವರೂಪಾಯ ಮಹಾಮೋಹವಿನಾಶಿನೇ।**
**ಮಾಯಾತೀತಾಯ ಶಾಂತಾಯ ರಾಮಕೃಷ್ಣಾಯ ತೇ ನಮಃ ॥ ೧೫ ॥**

ಮಹಾಮಾಯೆಯ ಆಕಾರದಲ್ಲಿರುವ, (ಜೀವಿಗಳನ್ನು ಸುತ್ತುಗಟ್ಟಿರುವ) ಮೋಹಗಳನ್ನೆಲ್ಲಾ ಅಳಿಸಿಹಾಕುವ, ಮಾಯೆಯನ್ನು ಮೀರಿದ ನೆಲೆಯಲ್ಲಿ ಇರುವ, ಶಾಂತಸ್ವರೂಪಿ ಶ್ರೀರಾಮಕೃಷ್ಣ — ನಿಮಗೆ ನಮಸ್ಕಾರ.

**ನಿರಂಜನಂ ನಿತ್ಯಮನಂತರೂಪಂ**
**ಭಕ್ತಾನುಕಂಪಾದ್ಧೃತ ವಿಗ್ರಹಂ ವೈ।**
**ಈಶಾವತಾರಂ ಪರಮೇಶಮೀಡ್ಯಂ**
**ತಂ ರಾಮಕೃಷ್ಣಂ ಶಿರಸಾ ನಮಾಮಃ ॥ ೧೬ ॥**

(ಯಾವುದೇ ಬಗೆಯ ಲೋಪ, ದೋಷ) ಕಲ್ಮಷಗಳಿಲ್ಲದ, ಶಾಶ್ವತರಾದ, ವಿಶ್ವದ ಅನಂತಕೋಟಿ ಚರಾಚರಗಳ ರೂಪದಲ್ಲಿರುವ, ಭಕ್ತರ ಮೇಲಿನ ಅಪಾರ ಕರುಣೆಯಿಂದ (ಅವರನ್ನು ಅನುಗ್ರಹಿಸಲು) ಶರೀರವನ್ನು ತಳೆದಿರುವ, ಈಶ್ವರನ ಅವತಾರವಾದ ಪೂಜನೀಯ ಶ್ರೀರಾಮಕೃಷ್ಣರಿಗೆ ತಲೆಬಾಗಿ ನಮಿಸೋಣ.

— ಸ್ವಾಮಿ ಅಭೇದಾನಂದ

## ಸೂಕ್ತಿಪ್ರಭ

## ಕವಿ ಸೂಕ್ತಿಗಳು

ಕೆಲಸದ ಘನತೆಯನ್ನೇ ಹೊಗಳಬೇಕಲ್ಲದೆ, ರೂಪವನ್ನಾಗಲಿ ಕುಲವನ್ನಾಗಲಿ ನೋಡಿ ಅಲ್ಲ. ಮಹಾತ್ಮನಾಗಲಿ, ಸಾಮಾನ್ಯನಾಗಲಿ ಮಾಡಿದ ಕೆಲಸದಿಂದ ಉತ್ತಮನೆನಿಸುತ್ತಾನೆ.

— ಭಾಸ ಮಹಾಕವಿ *('ಪಂಚರಾತ್ರ')*

ನಿನ್ನಲ್ಲಿ ನೀನು ಸತ್ಯದಿಂದಿರು. ಹಗಲುರಾತ್ರಿ ಹೀಗೇ ಸಾಗು; ಆಗ ಮಾತ್ರ ನೀನು ಯಾರಿಗೂ ತಪ್ಪಿ ನಡೆಯಲಾರೆ.

— ವಿಲಿಯಂ ಷೇಕ್ಸ್‌ಪಿಯರ್

ಸೌಂದರ್ಯವೇ ಸತ್ಯ; ಸತ್ಯವೇ ಸೌಂದರ್ಯ — ಜಗತ್ತಿನಲ್ಲಿ ನೀನು ತಿಳಿಯಬಹುದಾದ ಸಂಗತಿ ಇದೊಂದೆ; ಅದೇ ರೀತಿ ತಿಳಿಯಬೇಕಾದದ್ದೂ ಇದೊಂದೆ.

— ಜಾನ್ ಕೀಟ್ಸ್ *(ಓಡ್ ಆನ್ ಎ ಗ್ರಿಸಿಯನ್ ಅರ್ನ್)*

ಏನನ್ನೂ ನಿರೀಕ್ಷಿಸದವನು ನಿಜಕ್ಕೂ ಧನ್ಯನು. ಏಕೆಂದರೆ ಅವನಿಗೆ ಎಂದಿಗೂ ನಿರಾಸೆಯುಂಟಾಗದು.

— ಅಲೆಕ್ಸಾಂಡರ್ ಪೋಪ್

ಹಳೆಯದೆಂದ ಮಾತ್ರಕ್ಕೆ ಎಲ್ಲವೂ ಶ್ರೇಷ್ಠವಲ್ಲ. ಹೊಸದೆಂದ ಮಾತ್ರಕ್ಕೆ ಯಾವುದೂ ಕೆಟ್ಟದಲ್ಲ. ವಿವೇಕಿಗಳು ಪರೀಕ್ಷಿಸಿ ಒಳ್ಳೆಯದನ್ನು ಸ್ವೀಕರಿಸುತ್ತಾರೆ. ಮೂರ್ಖರು ಇತರರು ಹೇಳಿದ್ದನ್ನೇ ನಂಬಿ ನಡೆಯುತ್ತಾರೆ.

— ಕಾಳಿದಾಸ *('ಮಾಲವಿಕಾಗ್ನಿಮಿತ್ರ')*

ರವಿವದನವೆ ಶಿವಸದನವೊ
ಬರಿ ಕಣ್ಣದು ಮಣ್ಣೊ!
ಶಿವನಿಲ್ಲದ ಸೌಂದರ್ಯವೆ?
ಶವಮುಖದಾ ಕಣ್ಣೊ!

— ಕುವೆಂಪು *('ಆನಂದಮಯ ಈ ಜಗಹೃದಯ' ಪಕ್ಷಿಕಾಶಿ)*

ಕೂಸು ಮಾತಿಗೆ ಮೌನ ತಾಯಿ ಮಡಿಲು ಸದ್ದೈವ
ಮಾತು ಮೌನದ ಪ್ರತಿಮೆ, ಮೌನ ಮಾತಿನ ದೈವ.

— ಅಂಬಿಕಾತನಯದತ್ತ *('ಮೌನ' ಗಂಗಾವತರಣ)*

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ

— ಬಸವಣ್ಣ